ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 ದಿನಾಂಕ : 06–09–2019

# ಪತ್ರಿಕಾ ಪ್ರಕಟಣೆ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವೃಕ್ಷ ಗಣತಿ

ಬೆಂಗಳೂರು, ಸೆಪ್ಟೆಂಬರ್ 6 (ಕರ್ನಾಟಕ ವಾರ್ತೆ) :

ಬೆಂಗಳೂರು ನಗರದ ಮಲ್ಲೇಶ್ವರದಲ್ಲಿರುವ ಭಾರತ ಸರ್ಕಾರದ ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವೃಕ್ಷ ಗಣತಿ ನಡೆಸಿದೆ.

ವೃಕ್ಷ ಗಣತಿಯ ಜೊತೆ ಜೊತೆಗೆ ಅಪಾಯ ನಿರ್ವಹಣೆ ಕುರಿತು ಸಿದ್ಧಪಡಿಸಿರುವ ಸವಿವರ ವರದಿಯನ್ನು ಸಿದ್ಧಪಡಿಸಿ ಪಾಲಿಕೆಯ ಆಯುಕ್ತರಿಗೆ ಕಳುಹಿಸಿದೆ ಎಂದು ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕ ಡಾ ಎಂ ಪಿ ಸಿಂಗ್ ಅವರು ಪ್ರಕಟಣೆಯಲ್ಲಿ ತಿಳಿಸಿದೆ.

## TREE CENSUS UNDER BRUHAT BENGALURU MAHANAGARA PALIKE

**Bengaluru, September 6 (Karnataka Information) :**

**The Institute of Wood Science and Technology has conducted Tree Census under Bruhat Bengaluru Mahanagara Palike.**

**Enumeration and Risk Management of Trees has been completed and a detailed report has been sent to Bruhat Bengaluru Mahanagara Palike, according to Dr M P Singh, Director of the Institute of Wood Science and Technology.**

## ಮಾಜಿ ಸೈನಿಕರ ಮಕ್ಕಳಿಗೆ ಪ್ರಧಾನ ಮಂತ್ರಿಗಳ ಶಿಷ್ಯ ವೇತನ

ಬೆಂಗಳೂರು, ಸೆಪ್ಟೆಂಬರ್ 6 (ಕರ್ನಾಟಕ ವಾರ್ತೆ) :

2019–20 ನೇ ಸಾಲಿನ ಪ್ರಧಾನ ಮಂತ್ರಿಗಳ ಶಿಷ್ಯ ವೇತನವನ್ನು ವೃತ್ತಿಪರ ಪದವಿ ತರಗತಿಯಲ್ಲಿ ಈ ವರ್ಷ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದಿರುವ ಮಾಜಿ ಸೈನಿಕ ಹವಲ್ದಾರ ಅಥವಾ ವಾಯುಪಡೆ, ನೌಕಾಪಡೆಯ ತತ್ಸಮಾನ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದವರ ಮಕ್ಕಳಿಗೆ ಮಂಜೂರು ಮಾಡುವ ಬಗ್ಗೆ ಕೇಂದ್ರೀಯ ಸೈನಿಕ ಮಂಡಳಿ ಸುತ್ತೋಲೆ ಹೊರಡಿಸಿದೆ.

ಈ ಶಿಷ್ಯ ವೇತನವು ಕನಿಷ್ಠ ವಿದ್ಯಾರ್ಹತೆ ಉದಾಹರಣೆಗೆ ಪದವಿ ಪೂರ್ವ, ಡಿಪ್ಲೋಮಾ ಅಥವಾ ಪದವಿಯಲ್ಲಿ ಕನಿಷ್ಠ ಶೇಕಡಾ 60 ಕ್ಕಿಂತಲೂ ಹೆಚ್ಚು ಅಂಕಗಳನ್ನು ಪಡೆದಿರುವ ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ.

ಹೆಚ್ಚಿನ ವಿವರಗಳಿಗೆ ಮಾಜಿ ಸೈನಿಕರು ಅದರ ವಿವರ ಪಡೆಯಲು ಅಂತರ್ಜಾಲ ವಿಳಾಸ **www.ksb.gov.in** ಸಂಪರ್ಕಿಸುವಂತೆ ತಿಳಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ನವೆಂಬರ್ 15 ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Prime Minister's scholarship for the Children of Ex-servicemen

**Bengaluru, September 6 (Karnataka Information) :**

**Kendriya Sainik Board has issued notification for applying to the Prime Minister's Scholarship for the children of Ex-Servicemen up to the rank of Havaldar and equivalent posts in Navy and Air Force,**

**Students should have scored 60 per cent and above in Minimum Educational Qualification in first year pre-university, diploma and degree courses. Last date for submit the application is 15 November.**

**Ex-servicemen are hereby informed to visit Website : www.ksb.gov.in for detailed information and filling up of online application, says an official press release.**

## ಸಾರಿಗೆ ಅದಾಲತ್

ಬೆಂಗಳೂರು, ಸೆಪ್ಟೆಂಬರ್ 6 (ಕರ್ನಾಟಕ ವಾರ್ತೆ) :

ಸೆಪ್ಟೆಂಬರ್ 12 2019 ರ ಅಪರಾಹ್ನ 3–00 ಗಂಟೆಗೆ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಅಧಿಕಾರಿಗಳ ಕಚೇರಿ, ಬೆಂಗಳೂರು (ದಕ್ಷಿಣ) ಜಯನಗರ, ಬೆಂಗಳೂರು ಇಲ್ಲಿ ಸಾರಿಗೆ ಅದಾಲತ್‌ನ್ನು ಕಚೇರಿಯ 2 ನೇ ಮಹಡಿಯ ಆಡಿಟೋರಿಯಂನಲ್ಲಿ ಏರ್ಪಡಿಸಲಾಗಿದೆ. ಅದಾಲತ್‌ನಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದು, ಸಾರ್ವಜನಿಕರು ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಮತ್ತು ಕುಂದುಕೊರತೆಗಳ ಪರಿಹಾರಕ್ಕಾಗಿ ಇದರಲ್ಲಿ ಭಾಗವಹಿಸಲು ಪ್ರಕಟಣೆ ತಿಳಿಸಿದೆ.

## Sarige Adalat

**Bengaluru, September 6 (Karnataka Information)**

**Transport Adalat will be held on September 12 at 3-00 pm at the Office of the Deputy Commissioner for Transport and Senior Regional Transport Officer for Bengaluru (South) in Jayanagar.**

**Senior Officers of the Transport Department will be attending in the adalat. Interested persons are requested to avail this opportunity to get their grievances redressed, says an official press release.**

## ಮಹಾನಗರ ದಂಡಾಧಿಕಾರಿಗಳ ಹೆಚ್ಚುವರಿ ನ್ಯಾಯಾಲಯಗಳ ಕಟ್ಟಡದ ಉದ್ಘಾಟನಾ ಸಮಾರಂಭ

ಬೆಂಗಳೂರು, ಸೆಪ್ಟೆಂಬರ್ 6 (ಕರ್ನಾಟಕ ವಾರ್ತೆ) :

ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಮಹಾನಗರ ದಂಡಾಧಿಕಾರಿಗಳ ಹೆಚ್ಚುವರಿ ನ್ಯಾಯಾಲಯಗಳ ಕಟ್ಟಡದ ಉದ್ಘಾಟನಾ ಸಮಾರಂಭವು ಸೆಪ್ಟೆಂಬರ್ 9 ರಂದು ಸಂಜೆ 5–30 ಗಂಟೆಗೆ ನ್ಯಾಯಾಲಯದ ಆವರದಲ್ಲಿ ನಡೆಯಲಿದೆ.

ಭಾರತ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಮೋಹನ ಎಂ. ಶಾಂತನಗೌಡರ್ ಅವರು ಉದ್ಘಾಟಿಸಲಿದ್ದಾರೆ. ಕರ್ನಾಟಕ ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ಅಧ್ಯಕ್ಷತೆವಹಿಸಲಿರುವ ಈ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಇಲಾಖೆ ಸಚಿವ ಗೋವಿಂದ ಎಂ. ಕಾರಜೋಳ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವ ಜೆ. ಸಿ. ಮಾಧುಸ್ವಾಮಿ ಅವರು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ಎಸ್. ಅಬ್ದುಲ್ ನಜೀರ್ ಹಾಗೂ ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ ಅವರು ಪಾಲ್ಗೊಳ್ಳಲಿದ್ದಾರೆ.

## ಕೃಷಿ ಬೆಲೆ ಆಯೋಗದ ಅಧ್ಯಕ್ಷರಾಗಿ ಹನುಮನಗೌಡ ಬೆಳಗುರ್ಕಿ

ಬೆಂಗಳೂರು, ಸೆಪ್ಟೆಂಬರ್ 6 (ಕರ್ನಾಟಕ ವಾರ್ತೆ) :

ರೈತ ಚಳುವಳಿ ಮೂಲಕ ಗುರುತಿಸಿಕೊಂಡಿರುವ ಕೃಷಿ ತಜ್ಞ ಶ್ರೀ ಹನುಮನಗೌಡ ಬೆಳಗುರ್ಕಿ ಅವರನ್ನು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷರನ್ನಾಗಿ ರಾಜ್ಯ ಸರ್ಕಾರ ನೇಮಕ ಮಾಡಿದೆ.

ರೈತರು ಬೆಳೆದ ಬೆಳೆಗೆ ಲಾಭದಾಯಕ ಬೆಲೆ ದೊರಕಿಸುವ ನಿಟ್ಟಿನಲ್ಲಿ ವೈಜ್ಞಾನಿಕವಾಗಿ ಉತ್ಪಾದನಾ ವೆಚ್ಚ ಲೆಕ್ಕಾಚಾರ ಹಾಗೂ ಕೇಂದ್ರ ಸರ್ಕಾರಕ್ಕೆ ಬೆಂಬಲ ಬೆಲೆ ನಿಗದಿಪಡಿಸುವಂತಹ ಕಾರ್ಯಕ್ಕೆ ಪೂರಕವಾಗುವಂತಹ ಮಾಹಿತಿ ನೀಡುವುದು ಹಾಗೂ ರಾಜ್ಯ ಸರ್ಕಾರವು ನಿರ್ವಹಿಸುವಂತಹ ಹತ್ತು ಹಲವಾರು ರೈತಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಮಹತ್ತರ ಉದ್ದೇಶವನ್ನು ಕೃಷಿ ಬೆಲೆ ಆಯೋಗ ಹೊಂದಿದೆ.

ಛಾಯಾಚಿತ್ರ ಲಗತ್ತಿಸಿದೆ)

### ಸರ್ಕಾರಿ ಪ್ರಾಥಮಿಕ ಶಿಕ್ಷಕರ ವೃಂದದ ವರ್ಗಾವಣೆ ಗಣಕೀಕೃತ ಕೌನ್ಸಿಲಿಂಗ್

ಬೆಂಗಳೂರು, ಸೆಪ್ಟೆಂಬರ್ 6 (ಕರ್ನಾಟಕ ವಾರ್ತೆ) :

2018-19 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಿಕ್ಷಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ನಡೆಸಿ ಜುಲೈ 30 ರಂದು ಅಂತಿಮ ಆದ್ಯತಾ ಪಟ್ಟಿಯನ್ನು ಪ್ರಕಟಿಸಿದ್ದಾರೆ.

ಅಲ್ಲದೆ, ಸೆಪ್ಟೆಂಬರ್ 7 ರಂದು ಬೆಳಿಗ್ಗೆ 10-00 ಗಂಟೆಗೆ ಮುಖ್ಯ ಶಿಕ್ಷಕರು ಕಡ್ಡಾಯ ವರ್ಗಾವಣೆ ಜೇಷ್ಠತಾ ಪಟ್ಟಿ ಕ್ರಮ ಸಂಖ್ಯೆ 1 ರಿಂದ 15, ದೈಹಿಕ ಶಿಕ್ಷಕರು ಕಡ್ಡಾಯ ವರ್ಗಾವಣೆ ಜೇಷ್ಠತಾ ಪಟ್ಟಿ ಕ್ರಮ ಸಂಖ್ಯೆ 1 ರಿಂದ 8 ಸಹ ಶಿಕ್ಷಕರು ಕಡ್ಡಾಯ ವರ್ಗಾವಣೆ ಹಾಗೂ ಜೇಷ್ಠತಾ ಪಟ್ಟಿ ಕ್ರಮ ಸಂಖ್ಯೆ 1 ರಿಂದ 75 ರ ವರೆಗೆ ನಡೆಯಲಿದೆ.

ಅಂತೆಯೇ, ಸೆಪ್ಟೆಂಬರ್ 9 ರಂದು ಸಹ ಶಿಕ್ಷಕರು ಕಡ್ಡಾಯ ವರ್ಗಾವಣೆ ಜೇಷ್ಠತಾ ಪಟ್ಟಿ ಕ್ರಮ ಸಂಖ್ಯೆ 75 ರಿಂದ 159 ಹಾಗೂ ಸೆಪ್ಟೆಂಬರ್ 11 ರಂದು ಘಟಕದೊಳಗೆ ಪರಸ್ಪರ ವರ್ಗಾವಣೆ ಶಿಕ್ಷಕರು ಕಡ್ಡಾಯ ವರ್ಗಾವಣೆ ಜೇಷ್ಠತಾ ಪಟ್ಟಿ ಕ್ರಮ ಸಂಖ್ಯೆ 4 ನಡೆಯಲಿದೆ. ಈ ಪಟ್ಟಿಯಲ್ಲಿರುವ ಶಿಕ್ಷಕರಿಗೆ ದಿನಾಂಕಗಳಂದು ಬಸವನಗುಡಿಯ ಟಿನ್ ಶಾಲೆ ಆವರಣದಲ್ಲಿರುವ ಬೆಂಗಳೂರು ದಕ್ಷಿಣ ವಲಯ-01 ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ನಡೆಸಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.